ಶ್ರೀ ಎ. ಲಕ್ಷ್ಮೀಸಾಗರ್.—ನೀವು ನೋಟಿಸ್‌ನಲ್ಲಿ ಸ್ಪಷ್ಟವಾಗಿ ಅಯಾಯಂ ಖಾತೆಗಳಿಗೆ ಸಂಬಂಧ ಪಟ್ಟಿದ್ದಕ್ಕೆ ಮಾತ್ರ ಪ್ರತ್ಯೇಕವಾಗಿ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಯಮ ೩೩ರಲ್ಲಿ ನಿಮಗೆ ಸಂಬಂಧಪಟ್ಟಿದ್ದನ್ನೂ ಮಂತ್ರಿ ಅವರಿಗೆ ಸಂಬಂಧಪಟ್ಟಿದ್ದನ್ನೂ ಕೇಳಿದ್ದೇನೆ. ನಿಮಗೆ ಇದು ಸಂಬಂಧಪಡದೇ ಇದ್ದರೆ ಸುಮ್ಮನೇ ಏಕೆಬಿಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಆಗಬಹುದು ಸ್ವಾಮಿ. ನನ್ನ ಹತ್ತಿರ ತಕ್ಷಣ ಮಾಹಿತಿ ಇಲ್ಲ. ಬೇಗ ತರಿಸಿ ಕೊಂಡು ಉತ್ತರ ಕೊಡುತ್ತೇನೆ.

(xxiv) ಎಂ.ಎಸ್.ಕೆ. ಮಿಲ್‌ನಲ್ಲಿ ಕೆಲಸ ಮಾಡುತ್ತಿದ್ದ ೧೩ ಜನ ಪರಿಶಿಷ್ಟ ಜಾತಿ ಯವರನ್ನು ಕೆಲಸದಿಂದ ತೆಗೆದು ಹಾಕಿರುವ ಬಗ್ಗೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಂಎಸ್‌ಕೆ ಮಿಲ್ಲಿನದು, ತಮ್ಮ ಹತ್ತಿರ...

ಅಧ್ಯಕ್ಷರು.—ಒಂದೊಂದು ದಿವಸ ಒಂದೊಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟರೆ ಸಾಲದೇ, ಖರ್ಗೆಯವರೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಂದೊಂದು ದಿವಸಕ್ಕೆ ಒಂದೊಂದೇ ಕೇಳಿರುವುದು. ಈಗ ಉತ್ತರ ಕೂಡ ಬಂದಿದೆ ಮತ್ತು ಸಬ್ಜೆಕ್ಟ್ ಕೂಡ ಇದೆ. ಆದ್ದರಿಂದ ಕಾರ್ಮಿಕ ಮಂತ್ರಿಗಳನ್ನು ಕೇಳುತ್ತಿದ್ದೇನೆ. ಇದು ಸುಮಾರು ೧೩ ಜನ ಪರಿಶಿಷ್ಟ ಜಾತಿ ಕೆಲಸಗಾರರನ್ನು ಅವರು ಒಂದು ಕ್ರಿಮಿನಲ್ ಕೇಸ್‌ನಲ್ಲಿ ತೊಡಗಿದ್ದರು ಎಂದು ಅವರನ್ನು ಸೇವೆಯಿಂದ ಕಿತ್ತುಹಾಕಿದ್ದರು. ಆಮೇಲೆ ಅವರಿಗೆ ಡಿಸ್ಟ್ರಿಕ್ಟ್ ಕೋರ್ಟಿನಿಂದ ಬಿಡುಗಡೆಯಾಯಿತು. ಆಗ ಅವರು ಮ್ಯಾನೇಜ್‌ಮೆಂಟಿಗೆ ಆ ಸುದ್ದಿಯನ್ನು ತಲುಪಿಸಿ ಕಾನೂನು ಪ್ರಕಾರ ನಮ್ಮ ಸರ್ವಿಸನ್ನು ಕಂಟಿನ್ಯೂಟಿ ಇಟ್ಟುಕೊಂಡು ನಮ್ಮನ್ನು ಕೆಲಸಕ್ಕೆ ತೆಗೆದುಕೊಳ್ಳಿ ಎಂದು ಕೇಳಿಕೊಂಡರು. ಆ ಪ್ರಕಾರ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಏಕೆಂದರೆ ಕೇಸ್ ಅಕ್ವಿಟ್ ಆಗಿದೆ. ಆದರೆ ಅವರನ್ನು ತೆಗೆದುಕೊಳ್ಳಲಿಲ್ಲ. ಸುಮಾರು ಎರಡು ವರ್ಷ ಗಳಿಂದಲೂ ಸತತವಾಗಿ ನಾನು ಪ್ರಯತ್ನ ಮಾಡುತ್ತಿದ್ದೇನೆ. ಇದೇ ಸದನದಲ್ಲಿ ಮಾನ್ಯ ಅಜೀಜ್ ಸೇಠ್ ಅವರು ಸಚಿವರಾಗಿದ್ದಾಗ ಅವರನ್ನು ಕೇಳಿದಾಗ ಅವರು ತಕ್ಷಣ ಮಾಡಿಸಿಕೊಡುತ್ತೇನೆ ಎಂದು ಹೇಳಿದ್ದರು.

ಅಧ್ಯಕ್ಷರು.—ಈಗ ಇವರನ್ನು ಕೇಳಿದ್ದೀರಿ. ಇವರು ಮಾಡಿಸಿಕೊಡುತ್ತಾರೆ ಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದಕ್ಕೆ ನಾನು ಭರವಸೆಗಳ ಕಮಿಟಿಗೆ ಇದು ಹೋದಮೇಲೆ ಎತ್ತಬೇಕೆಂದು ಮಾಡಿದ್ದೆ. ಪುನಃ ಅವರಿಗೆ ಕೂಡ ಒಂದು ಲೆಟರ್ ಬರೆದಿದ್ದೆ. ಸಂಬಂಧಪಟ್ಟ ಮ್ಯಾನೇಜ್‌ಮೆಂಟ್‌ನವರಿಗೂ ಬರೆದಿದ್ದೇನೆ, ಆದರೆ ಇಲ್ಲಿಯವರೆಗೂ ಕೂಡ ಅವರಿಂದ ಉತ್ತರವಿಲ್ಲ. ಇಲ್ಲಿರುವುದು ಕೇವಲ ೧೩ಜನ ನೌಕರರ ಬಗ್ಗೆ ಇವತ್ತು ಅವರು ಬೀದಿಯಲ್ಲಿದ್ದಾರೆ, ಇವತ್ತು ಅವರೆಲ್ಲರನ್ನೂ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಆದೇಶ ಕೊಡಿಸಿದರೆ ಅವರ ಜೀವ ಉಳಿಯುತ್ತದೆ.

ಶ್ರೀ ಡಿ. ಮಂಜುನಾಥ (ಮಾನ್ಯ ಕಾರ್ಮಿಕ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೩ ಮಂದಿ ಎಂಎಸ್‌ಕೆ ನೌಕರರು ಕೆಲಸದಲ್ಲಿದ್ದರು ಎನ್ನುವುದು ನಿಜ. ಆದರೆ ಅವರ ಮೇಲೆ ಪೋಲೀಸರು ಕೇಸ್ ಹಾಕಿದ್ದುದನ್ನು ಅವರು ಮ್ಯಾನೇಜ್‌ಮೆಂಟಿಗೆ ತಿಳಿಸಿರಲಿಲ್ಲ. ಆದರೂ ಸಹ ನಾನು ವಿಚಾರಿಸಿದಾಗ ತಿಳಿದು ಬಂದಿದ್ದೇನೆಂದರೆ ಅವರು ಬಹಳ ದಿವಸ ಗೈರು ಹಾಜರಾಗಿದ್ದರಿಂದ ಕೆಲಸದಿಂದ ಇವರನ್ನು ತೆಗೆಯಲಾಯಿತು. ಎಂದು ಇಷ್ಟೇ ಅಲ್ಲದೆ ಮ್ಯಾನೇಜ್‌ಮೆಂಟಿನವರು ಈಗ ವರ್ಕ್‌ಲೋಡ್ ನೋಡಿ ಇನ್ನೂ ೧೯೬ ಜನರನ್ನು ಕೆಲ್ಲಸದಿಂದ ತೆಗೆದುಹಾಕಿದ್ದಾರೆ. ಈಗಾಗಲೇ ಇದು ಲೇಬರ್ ಕೋರ್ಟ್ ಮುಂದೆ ಕೂಡ ಇದೆ. ನೌಕರರೂ ಸಹ ಡೆಪ್ಯುಟಿ ಲೇಬರ್ ಕಮಿಷನರ್ ಹತ್ತಿರ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಹಾಕಿದ್ದಾರೆ. ಅದು ಆಲ್ಲಿ ತೀರ್ಮಾನವಾಗದಿದ್ದರೆ ಅದು ಕೋರ್ಟಿಗೆ ಹೋಗುತ್ತದೆ. ನಾನೂ ಕೂಡ ನಿನ್ನೆ ದಿವಸ ಅಧಿಕಾರಿಗಳನ್ನು ಕರೆಸಿ ಮಾತನಾಡಿದ್ದೇನೆ. ಇತ್ಯರ್ಥ ಮಾಡಿಸಲು ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಏಕೆಂದರೆ ಅಧ್ಯಕ್ಷರೇ, They are not dismissed, Thy are arrested ನಾನು ಚರ್ಚೆ ಮಾಡುವುದಿಲ್ಲ. ಒಂದೈದು ನಿಮಿಷದಲ್ಲೇ ಇದನ್ನು ಪರಿಹರಿಸಬಹುದು ಅಷ್ಟೆ.

ಶ್ರೀ ಎ. ಲಕ್ಷ್ಮೀಸಾಗರ್.—ಡಿಸ್ಕ್ವಷನ್, ಕ್ಲಾರಿಫಿಕೇಷನ್ನು, ಇಂಟರ್ ಜೆಕ್ಷನ್ ಎಲ್ಲಾ ಮಾಡಿ ನಾನು ಬೇಡ ಎನ್ನುವುದಿಲ್ಲ. ಏನು ಸ್ವಾಮಿ ಇದೆಲ್ಲ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ ತಮ್ಮ ಮೂಲಕ ಈ ಪ್ರಶ್ನೆ ಕೇಳಿದ್ದೇನೆ. ತಾವು ಒಂದು ನಿಮಿಷ ಕೇಳಿ. ಏಕೆಂದರೆ ಅವರು ಗೈರುಹಾಜರಾಗಿರಲಿಲ್ಲ. ಅವರನ್ನು ಅರೆಸ್ಟ್ ಮಾಡಿಕೊಂಡು ಹೋಗಿದ್ದರಿಂದ ಸ್ಯಾಚುರಲಿ ಅವರು ಅಬ್ಸೆಂಟ್ ಆದರು. ಅವರಿಗೆ ಬರೆಯುವುದಕ್ಕೆ ಬರುವುದಿಲ್ಲ, ಓದುವುದಕ್ಕೆ ಬರುವುದಿಲ್ಲ. ಆ ಮೇಲೆ ಅವರ ಪರವಾಗಿ ಕೆಲವು ಯೂನಿಯನ್ ಲೀಡರ್ ಹೋಗಿ ಓರಲ್ ಆಗಿ ರೆಪ್ರೆಸೆಂಟ್ ಮಾಡಿ ಇಂತಿಂಥವರನ್ನು ಹಿಡಿದುಕೊಂಡು ಹೋಗಿರುವುದರಿಂದ ಅವರೆಲ್ಲ ಕೆಲಸದ ಮೇಲೆ ಬರಲು ಆಗುವುದಿಲ್ಲ, ಆದ್ದರಿಂದ ಅವರಿಗೆ ರಜೆ ಮಂಜೂರು ಮಾಡಿ ಎಂದರೂ ಅವರಿಗೆ ರಜೆ ಸಿಗಲಿಲ್ಲ. ಆದಕ್ಕೆ ತಾವು ಮ್ಯಾನೇಜ್‌ಮೆಂಟಿಗೆ ಡೈರೆಕ್ಷನ್ ಕೊಟ್ಟರೆ ಇವರಿಗೆ ನ್ಯಾಯ ಸಿಗುತ್ತದೆ. ಇದು ರಿಟ್ರೆಂಚ್ ಮಾಡಿದವರ ಪ್ರಶ್ನೆಯಲ್ಲ. ಅವರಿಗೆ ಸಂಬಂಧಿಸಿದ್ದಲ್ಲ. ಇವರನ್ನು ತೆಗೆದದ್ದು ಏಕೆ ? ಇವರನ್ನು ರಿಟ್ರೆಂಚ್ ಮಾಡಿಲ್ಲ. ಆದ್ದರಿಂದ ತಾವು ದಯವಿಟ್ಟು ಸಂಬಂಧಿಸಿದ ಫ್ಯಾಕ್ಟರಿಯ ಜನರಲ್ ಮ್ಯಾನೇಜರ್ ಅವರಿಗೆ ಇವರನ್ನು ಕೆಲಸಕ್ಕೆ ತೆಗೆದುಕೊಳ್ಳಿ ಎಂದು ಆಜ್ಞೆ ಹೊರಡಿಸಿದರೆ ಸಾಕು ಖಂಡಿತವಾಗಿ ಅವರು ತೆಗೆದುಕೊಳ್ಳುತ್ತಾರೆ.

ಶ್ರೀ ಡಿ. ಮಂಜುನಾಥ —ಮಾನ್ಯ ಅಧ್ಯಕ್ಷರೇ, ಈಗ ಏನಾಗಿದೆ ಎಂದರೆ ನಮ್ಮ ಡೆಪ್ಯುಟಿ ಲೇಬರ್ ಕಮಿಷನರ್‌ರವರ ಮುಂದೆ ಈಗ ಅರ್ಜಿ ಹಾಕಿದ್ದಾರೆ. ಅವರು ಅದನ್ನು ತೀರ್ಮಾನ ಸೂಡಿ ಏನಾದರೂ ಸೆಟ್ಲಮೆಂಟ್ ಮಾಡಲು ಆಗದಿದ್ದಾಗ ಆಗ ಅವರು ಲೇಬರ್ ಕೋರ್ಟಿಗೆ ರೆಫರ್ ಮಾಡಬೇಕು. ಮಾನ್ಯ ಸದಸ್ಯರು ಹೇಳಿದ ಹಾಗೆ ನಾನು ಈಗಾಗಲೇ ಲೇಬರ್ ಕಮಿಷನರ್‌ರವರನ್ನು ಕರೆಸಿ ಇದನ್ನು ಬಗೆಹರಿಸುವಂತೆ ತಿಳಿಸಿದ್ದೇನೆ. ಖರ್ಗೆಯವರು ಮೂರು ದಿವಸದ ಹಿಂದೆ ಬರೆದಿದ್ದ ಪತ್ರದ ಆಧಾರದ ಮೇಲೆ ನಾನು ಕರೆಸಿ ಮಾತನಾಡಿದ್ದೇನೆ. ಆದರಂತೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತೇನೆ.

XXV ಭಟ್ಕಳ ಪುರಸಭೆಯ ಸರಹದ್ದಿನಲ್ಲಿ ಬರುವ ಒಳಚರಂಡಿ ನೀರು ಕುಡಿಯುವ ನೀರಿನಲ್ಲಿ ಸೇರಿರುವುದರಿಂದ ಉಂಟಾಗಿರುವ ತೊಂದರೆ

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಪುರಸಭೆಯ ಸರಹದ್ದಿನಲ್ಲಿ ಪುರಸಭೆಯ ಒಳಚರಂಡಿ ಯೋಜನೆ ಕೆಟ್ಟಿದ್ದು ದೋಷಪೂರಿತ ನೀರು ಕುಡಿಯುವ ನೀರಿನ ಪೈಪಿನಲ್ಲಿ ಸೇರಿಕೊಂಡು ಕುಡಿಯುವ ನೀರು ಸಹ ಅಲ್ಲಿ ಉಪಯೋಗಕ್ಕೆ ಬರದಂತಾಗಿರುವುದಲ್ಲದೆ ಸಾಂಕ್ರಾಮಿಕ ರೋಗ ಹುಟ್ಟುವ ಸಾಧ್ಯತೆ ಇದೆ. ಈ ಬಗ್ಗೆ ಭಟ್ಕಳದ ಪುರಸಭೆ ಜನ ತೀವ್ರ ಪ್ರತಿಭಟನೆ ಸಂಬಂಧಪಟ್ಟವರಿಗೆ ಸಲ್ಲಿಸಿದ್ದರೂ ಯಾರೂ ಇದನ್ನು ಸರಿಪಡಿಸುವುದಕ್ಕೆ ಮುಂದೆ ಬಂದಿಲ್ಲ. ಆದ್ದರಿಂದ ಮೊನ್ನೆ ದಿವಸ ನನಗೆ ಆಲ್ಲಿಯ ಪುರಸಭೆ ಅಧ್ಯಕ್ಷರು ಹಾಗೂ ಸದಸ್ಯರು ಬಂದು ತಂತಿ ಕೊಟ್ಟು ಈ ಸದನದ ಮೂಲಕ ಸರ್ಕಾರದ ಗಮನ ಸೆಳೆಯಲು ಕೇಳಿಕೊಂಡಿದ್ದಾರೆ. ಇದು ಎಚ್ಚರಿಕೆಯ ವಿಷಯ. ಸಾಂಕ್ರಾಮಿಕ ರೋಗ ಬಂದ ಮೇಲೆ ತಡೆಗಟ್ಟುವುದಕ್ಕಾಗುವುದಿಲ್ಲ. ನಾವು ಸಂಭವಿಸುವ ಸಾಧ್ಯತೆ ಇದೆ. ಆದ್ದರಿಂದ ಸಂಬಂಧಪಟ್ಟವರಿಗೆ ಸೂಕ್ತ ಆಜ್ಞೆ ಹೊರಡಿಸಿ ಅದನ್ನು ಸರಿಪಡಿಸುವ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಸಭೆಯ ಗಮನಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ನಗರಾಡಳಿತ ಮಂತ್ರಿಗಳು).—ದೋಷ ಪೂರಿತ ಕೊಳಚೆ ನೀರು. ಕುಡಿಯುವ ನೀರಿನ ನಾಲೆಗೆ ಹೋಗಿ ಸೇರುತ್ತಿರುವುದರಿಂದ ಜನರು ತೊಂದರೆ ಗೀಡಾಗುತ್ತಿದ್ದಾರೆಂದು ಹೇಳುತ್ತಿದ್ದಾರೆ. ಈ ದೋಷಪೂರಿತ ನೀರು ಸೇರದಂತೆ ತಕ್ಷಣ ತಡೆಯ ಬೇಕೆಂದು ಇವತ್ತೇ ಆಜ್ಞೆಯ ಅಧಿಕಾರಿಗಳಿಗೆ ತಿಳಿಸುತ್ತೇನೆ. ಆನಂತರ ಇದರ ಬಗ್ಗೆ ವಿವರವಾದ ವರದಿ ತಿಳಿಸಿ ಮಾನ್ಯ ಸದಸ್ಯರಿಗೆ ಕಳಿಸುತ್ತೇನೆ.